ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಇದರಲ್ಲಿ ನಿಷ್ಪಕ್ಷಪಾತವಾದಂತಹ ತನಿಖೆಯನ್ನು ಇಲಾಖೆಯ ಉನ್ನತಾಧಿಕಾರಿಗಳಿಂದ ಖಂಡಿತವಾಗಿಯೂ ನಾನು ಮಾಡಿಸುತ್ತೇನೆ. ಸತ್ಯ ಸಂಗತಿ ಏನಿದೆ, ಅದು ಹೊರಗೆ ಬರಲಿ. ಯಾವುದೇ ಮಾನಸಿಕ ತೊಂದರೆ ಎಂದರೆ, ಅದರಲ್ಲಿ ಎರಡು ವಿಧ ಇರುತ್ತದೆ. ಒಂದು, ಬಹಳ ಸೂಕ್ಷ್ಮಮತಿಗಳಾಗಿರುತ್ತಾರೆ, ಅವರು over react ಮಾಡುತ್ತಾರೆ. ಕೆಲವರು ಏನು ಕೊಟ್ಟರೂ ಕೂಡ, ಇಂತಹ ನಮ್ಮಂತಹ ದಪ್ಪ ಚರ್ಮ ಇರತಕ್ಕಂಥ ಜನ, ಹೊರಗಡೆ ನಮಗೆ ಏನು ಛೀ! ಥೂ! ಅಂದರೂ ಕೂಡ, ಅದೇನೂ ಇಲ್ಲವೆಂದು ಕೊಡವಿಕೊಂಡು ಹೋಗುವಂತಹ ನಮ್ಮಂತಹವರೂ ಇರುತ್ತಾರೆ. ಆದ್ದರಿಂದ ಈ ಸಂದರ್ಭದಲ್ಲಿ ಒಂದು ನಿಷ್ಪಕ್ಷಪಾತವಾದಂತಹ ತನಿಖೆಯನ್ನು ನಾವು ಮಾಡಿಸುತ್ತೇವೆ.

(4) ಜಲ ನಿರ್ಮಲ ಯೋಜನೆ ಅವಧಿ ವಿಸ್ತರಿಸುವ ಕುರಿತು.

ಶ್ರೀ ಡಿ.ಆರ್.ಪಾಟೀಲ್ [ಗದಗ]:– ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜಲ ನಿರ್ಮಲ ಯೋಜನೆ ಈಗ ಅನುಷ್ಠಾನಗೊಳ್ಳುತ್ತಿದೆ. ಡಿಸೆಂಬರ್ 31ಕ್ಕೆ ಅವರ ಅವಧಿ ಮುಕ್ತಾಯಗೊಳ್ಳುತ್ತಿದೆ. ಬಹಳಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಇನ್ನೂ ನಡೆಯುತ್ತಿದೆ. ಅದರ ಅನುಷ್ಠಾನ ಈ ಡಿಸೆಂಬರ್ 31ರೊಳಗೆ ಪೂರ್ತಿಯಾಗುವುದಿಲ್ಲ. ಅದಕ್ಕೆ ತಾವು World Bankಗೆ time extensionಗೆ ಕೂಡಲೇ ಮನವಿ ಮಾಡಬೇಕಾಗುತ್ತದೆ. ಇನ್ನೂ ಸುಮಾರು 150 ಕೋಟಿ ರೂ.ಗಳಷ್ಟು ನಡೆದ ಕಾಮಗಾರಿಗಳಿಗೆ ಹೆಚ್ಚಿನ ಹಣ ಬೇಕಾಗುತ್ತದೆಂದು ತಿಳಿದು ಬಂದಿದೆ. ಈ ಬಗ್ಗೆ World Bank ಅಧಿಕಾರಿಗಳ ಜೊತೆಗೆ ನಾನು ಚರ್ಚೆ ಮಾಡಿದೆ. ಈಗ ಕೇಂದ್ರ ಸರ್ಕಾರದ ಹೊಸ ನೀತಿಯಿಂದಾಗಿ, World Bank ನೇರವಾಗಿ ಹಣಕಾಸಿನ ಸಹಾಯವನ್ನು ರಾಜ್ಯ ಸರ್ಕಾರಗಳಿಗೆ ಮಾಡಲಿಕ್ಕೆ ಮುಂದೆ ಬರುತ್ತಿದೆ. ಅದೂ 0% interest ನಲ್ಲಿ, 10 ವರ್ಷ moratorium, 25 years re-payment period ಇರುತ್ತದೆ. ಅದಕ್ಕೆ ಬಹಳ ಅನುಕೂಲವಾಗುತ್ತದೆ. ದಯವಿಟ್ಟು ಈ facility ಯನ್ನು ಉಪಯೋಗ ಮಾಡಿಕೊಂಡು, ಅದಕ್ಕೆ ಬೇಕಾಗುವಂತಹ ಹೆಚ್ಚಿನ ಹಣವನ್ನು ತಾವು ಹೊಂದಾಣಿಕೆ ಮಾಡಬೇಕು. Time extension ಕೇಳಬೇಕು. ಇದರ ಜೊತೆಗೆ ಈಗ 700 ಗ್ರಾಮ ಪಂಚಾಯಿತಿಗಳಲ್ಲಿ ಮಾತ್ರ ಈ ಜಲ ನಿರ್ಮಲ ಯೋಜನೆ ಅನುಷ್ಠಾನಗೊಳ್ಳುತ್ತಿದೆ. ನಮ್ಮ ಭಾಗದಲ್ಲಿ ಇನ್ನೂ 2–3% ಗ್ರಾಮ

ಪಂಚಾಯಿತಿಗಳಲ್ಲಿ ಈ ಯೋಜನೆ ಅನುಷ್ಠಾನ ಇಲ್ಲ. ಆ 2–3% ಗ್ರಾಮ ಪಂಚಾಯಿತಿಗಳಿಗೂ ಒಂದು ಹೊಸ ಯೋಜನೆಯನ್ನು ನೀವು World Bankಗೆ pose ಮಾಡಿದರೆ, ಅವರು ಅದನ್ನು favourable ಆಗಿ consider ಮಾಡುವಂತಹ ಪರಿಸ್ಥಿತಿ ಇರುವುದರಿಂದ, ಆ ಉಳಿದ ಗ್ರಾಮ ಪಂಚಾಯಿತಿಗಳಲ್ಲಿ ಆ ಯೋಜನೆ ಅನುಷ್ಠಾನಗೊಳ್ಳಲಿಕ್ಕೆ ಸೂಕ್ತ ಕ್ರಮ ಸರ್ಕಾರ ಕೈಗೊಳ್ಳಬೇಕೆಂದು ನಾನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ...

ಅಧ್ಯಕ್ಷರು:– ಶೂನ್ಯ ವೇಳೆಯಲ್ಲಿ ಎಲ್ಲರೂ ಉಪ ಪ್ರಶ್ನೆ ಕೇಳಿದಂತೆ ಕೇಳುತ್ತಿದ್ದರೆ ಹೇಗೆ?

ಶ್ರೀ ಹಂಪನಗೌಡ ಬಾದರ್ಲಿ [ಸಿಂಧನೂರು]:– ಒಂದೇ ಒಂದು ನಿಮಿಷ. ಜಲ ನಿರ್ಮಲ ಯೋಜನೆ ನಮ್ಮ ಉತ್ತರ ಕರ್ನಾಟಕದಲ್ಲಿ ಸುಮಾರು 11 ಜಿಲ್ಲೆಗಳಲ್ಲಿ ಪ್ರಾರಂಭ ಮಾಡಿದ್ದಾರೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ವಿಶೇಷವಾಗಿ fluoride contents, chemical contents, iron contents ನೀರಿನಲ್ಲಿ ಮಿಶ್ರಣ ಆಗಿರುವುದರಿಂದ ನೀರು ಕುಡಿಯಲಿಕ್ಕೆ ಯೋಗ್ಯವಾಗಿಲ್ಲ. ಇಂತಹ ಯೋಜನೆಗಳಿಗೆ latest ಆಗಿ ಮೊನ್ನೆ ಆಂಧ್ರಪ್ರದೇಶದಲ್ಲಿ de-fluoride plants ಗಳನ್ನು ಯೋಜನೆಗೆ ಅಳವಡಿಸತಕ್ಕಂಥ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ. ಇಲ್ಲೂ ಕೂಡ ಆ ಯೋಜನೆಗಳಿಗೆ de-fluoride plants ಗಳನ್ನು ಅಳವಡಿಸತಕ್ಕಂಥ ಒಂದು ಚಿಂತನೆಯನ್ನು ರಾಜ್ಯ ಸರ್ಕಾರ ಮಾಡುತ್ತಿದೆಯೋ, ಇಲ್ಲವೋ ಎನ್ನುವ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ [ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು]:– ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್.ಪಾಟೀಲ್‌ರವರು ಮತ್ತು ಮಾನ್ಯ ಸಿಂಧನೂರು ಶಾಸಕರು ಜಲ ನಿರ್ಮಲ ಯೋಜನೆಯ ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ಪ್ರಸ್ತಾವನೆಯನ್ನು ವಿಶ್ವ ಬ್ಯಾಂಕ್‌ಗೆ

ಸಲ್ಲಿಸಬೇಕೆನ್ನುವಂತಹ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಇಲಾಖೆಯ ಕಾರ್ಯದರ್ಶಿಗಳ ಜೊತೆಗೆ ಚರ್ಚೆ ಮಾಡುತ್ತೇನೆ. ಅತ್ಯಂತ ಶೀಘ್ರದಲ್ಲಿಯೇ ಇನ್ನುಳಿದ ಗ್ರಾಮಗಳಿಗೂ ಸಹಿತ ಈ ಯೋಜನೆ ವಿಸ್ತರಣೆ ಮಾಡುವ ಅವಶ್ಯಕತೆ ಇದೆ. Zero percent ನಲ್ಲಿ ನಮಗೆ ಸಿಗಬೇಕಾದಂತಹ ಸಾಲದ ಹಣವನ್ನು ಪಡೆಯುವುದಕ್ಕೆ, ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ನಾನು ಇಲಾಖೆ ಮುಖೇನ ಕಾರ್ಯಕ್ರಮವನ್ನು ಜರುಗಿಸಲಿಕ್ಕೆ ಕೋರುತ್ತೇನೆ. ಮಾನ್ಯ ಶಾಸಕರು ಆಂಧ್ರಪ್ರದೇಶದಲ್ಲಿ ಹಾಕಿದ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸಹಿತ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗೆ de-fluoride machine ಗಳನ್ನು ಉಪಯೋಗ ಮಾಡಬೇಕೆನ್ನುವಂತಹ ಪ್ರಸ್ತಾವನೆಯನ್ನು ಇಟ್ಟಿದ್ದಾರೆ. ಈ ಮೊದಲು ಒಂದು ಸಲ ಹಿಂದಿನ ಸರ್ಕಾರದಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡುವಂತಹ ಪ್ರಯತ್ನ ನಡೆದಿತ್ತು ಎನ್ನುವುದನ್ನೂ ಸಹಿತ ನಾನು ನೋಡಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಸಹಿತ ಅದನ್ನು ಮಾಡಿದ್ದನ್ನು ನಾನು ನೋಡಿದ್ದೇನೆ. ಗದಗ್ ಜಿಲ್ಲೆಯಲ್ಲೂ ಸಹಿತ ಆಗಿದ್ದನ್ನು ನೋಡಿದ್ದೇನೆ; ಹಾವೇರಿ ಜಿಲ್ಲೆಯಲ್ಲಿ de-fluoride ಮಾಡುವಂತಹ machines ಹಾಕಿರುವಂತಾದ್ದರಲ್ಲಿ ಸಾಕಷ್ಟು ಯಶಸ್ವಿಯಾಗದಿರುವುದನ್ನು ನೋಡಿದ್ದೇನೆ. ಆಂಧ್ರದಲ್ಲಿ ಏನಾದರೂ ಹೊಸ ರೀತಿಯ ಯೋಜನೆಗಳು ಜಾರಿಯಲ್ಲಿ ಬಂದಿದ್ದರೆ, ಅದನ್ನು ಪರಿಶೀಲನೆ ಮಾಡಿ, ನಮ್ಮಲ್ಲಿ ಕಾರ್ಯಗತ ಮಾಡಬೇಕಾದಂತಹ ಕೆಲಸಕ್ಕೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಅಧ್ಯಕ್ಷರು:– ಈಗ ವಿರೋಧ ಪಕ್ಷದ ನಾಯಕರು ವಿಷಯ ಪ್ರಸ್ತಾಪಿಸಿ.

[ಗೊಂದಲ]

ಶ್ರೀ ಎ.ಎಸ್.ಬಸವರಾಜ್:– ಮಾನ್ಯ ಅಧ್ಯಕ್ಷರೆ, ಡಿ–ಫ್ಲೋರೈಡ್ ಬಗ್ಗೆ ಮಾನ್ಯ ಸಚಿವರು ಹೇಳಿದರು. ಅದೇ ರೀತಿಯಲ್ಲಿ ಅರಸೀಕೆರೆಯಲ್ಲೂ ಕೂಡ ಯಾದಾಪುರ ಮತ್ತು ಸಂಕೊಂಡನಹಳ್ಳಿಯಲ್ಲಿ ಹಾಕಿದ್ದೇವೆ. ಅದು ನಿಜವಾಗಿಯೂ ಸಹಿತ ಕೆಲಸ ಮಾಡದೆ ನಿಂತು ಹೋಗಿದೆ. ಗ್ರಾಮ ಪಂಚಾಯಿತಿ ಅದನ್ನು ಸರಿಯಾಗಿ ಮೆಂಟೇನ್ ಮಾಡುತ್ತಿಲ್ಲ...

[ಗೊಂದಲ]

ಅಧ್ಯಕ್ಷರು:– ಶೂನ್ಯ ವೇಳೆಯಲ್ಲಿ ಉಪ ಪ್ರಶ್ನೆಗಳನ್ನು ಕೇಳಿದಂತೆ ಎಲ್ಲರೂ ಕೇಳಿದರೆ ಹೇಗೆ? ವಿರೋಧ ಪಕ್ಷದ ನಾಯಕರೆ, ತಮ್ಮದೇನಿದೆ ಹೇಳಿ.

(5) ವಿಷಯ:– ಕೊಡಗು ಜಿಲ್ಲೆಯ ಜಮ್ಮಾ ಮತ್ತು ಬಾಣೆ ವಿಷಯವಾಗಿ ಸರ್ಕಾರ ಹೊರಡಿಸಿದ ಸುತ್ತೋಲೆಗಳನ್ನು ವಾಪಸ್ ಪಡೆಯುವ ಬಗ್ಗೆ ನೀಡಲಾದ ಭರವಸೆಯನ್ನು ಕಾರ್ಯಗತಗೊಳಿಸದಿರುವ ಬಗ್ಗೆ.

ಶ್ರೀ ಧರ್ಮಸಿಂಗ್ [ವಿರೋಧ ಪಕ್ಷದ ನಾಯಕರು]:– ಮಾನ್ಯ ಅಧ್ಯಕ್ಷರೆ, ನಾಳೆ ಅಧಿವೇಶನದ ಕೊನೆಯ ದಿನವಾಗಿದೆ. ಕೊಡಗು ಜಿಲ್ಲೆಯ ಜಮ್ಮಾ ಮತ್ತು ಬಾಣೆ ವಿಷಯವಾಗಿ ಹೊರಡಿಸಲಾಗಿರುವ ಸುತ್ತೋಲೆಗಳೆಲ್ಲವನ್ನೂ ವಾಪಸ್ ತೆಗೆದುಕೊಳ್ಳುವುದಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಇನ್ನೂ ಕೂಡ ಯಾವ ಸುತ್ತೋಲೆಗಳನ್ನೂ ವಾಪಸ್ ತೆಗೆದುಕೊಂಡಿಲ್ಲ. ಕಂದಾಯ ಇಲಾಖೆಗೆ ಸಂಬಂದಪಟ್ಟದ್ದು ಆಗಲಿ, ಅರಣ್ಯ ಇಲಾಖೆಗೆ ಸಂಬಂಧಪಟ್ಟದ್ದು ಆಗಲಿ, ಯಾವ ಸುತ್ತೋಲೆಯನ್ನೂ ಸಹ ಇದುವರೆವಿಗೂ ವಾಪಸ್ ತೆಗೆದುಕೊಂಡಿಲ್ಲ, ಏಕೆ? ಸದನದಲ್ಲಿ ಚರ್ಚೆಯಾಗಿ 10 ದಿವಸಗಳಾಯಿತು. ತಮ್ಮ ಎದುರುಗಡೆಯೇ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸುತ್ತೋಲೆಗಳನ್ನೂ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಇನ್ನೂ ತೆಗೆದುಕೊಂಡಿಲ್ಲ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲೇ ಇದ್ದಾರೆ. ಇದಕ್ಕೆ ಸರ್ಕಾರ ಸ್ಪಷ್ಟವಾದಂತಹ ಉತ್ತರವನ್ನು ಕೊಡಲೇಬೇಕು. It is the question of credibility of the Government. ಸರ್ಕಾರ ಭರವಸೆ ಕೊಟ್ಟಂತೆ ನಡೆದುಕೊಳ್ಳಲೇಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು:– ಮಾನ್ಯ ಸಚಿವರು ಏನು ಹೇಳುತ್ತಾರೋ ನೋಡೋಣ. ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡದೆ ಮಾತನಾಡಲಿಕ್ಕೆ ನೀವು ಎದ್ದು ನಿಂತರೆ ಹೇಗೆ?